# ಪತ್ರಿಕಾ ಪ್ರಕಟನೆ

ಇದೇ ರವಿವಾರ  12 ಮಾರ್ಚ್ 2023 ರಂದು  ಭಾರತೀಯ ತಂತ್ರಜ್ಞಾನ  ಸಂಸ್ಥೆ  ಧಾರವಾಡ  ಸ್ಥಾಯಿ ಪರಿಸರದ ಉದ್ಘಾ ಟನೆ ಮಾನ್ಯ ಪ್ರಧಾನ  ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರಿಂದ ಮಧ್ಯಾಹ್ನ 3:೦೦ ಕ್ಕೆ ಜರುಗಲಿದೆ. ಈ ಕಟ್ಟಡ ಧಾರವಾಡದ ಚಿಕ್ಕಮಲ್ಲಿಗವಾಡ 580011 ದಲ್ಲಿದೆ. ಪ್ರಧಾನ  ಮಂತ್ರಿ ಶ್ರೀ ನರೇಂದ್ರ ಮೋದಿ ಅವರು  ದೇಶಕ್ಕೆ ಸಮರ್ಪಣೆ ಮಾಡಲಿದ್ದಾರೆ, [ಕರ್ನಾಟಕ ರಾಜ್ಯದ  ಗೌರವಾನ್ವಿತ ರಾಜ್ಯ ಪಾಲರಾದ ಶ್ರೀ ಥಾವರಚಂದ್  ಗೆಹ್ಲೋಟ್; ರಾಜ್ಯದ  ಮುಖ್ಯ ಮಂತ್ರಿಗಳಾದ  ಶ್ರೀ ಬಸವರಾಜ ಬೊಮ್ಮಾಯಿ; ಕೇಂದ್ರೀಯ ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಮತ್ತು ಉದ್ಯಮಶೀಲತಾ ಮಂತ್ರಿ- ಶ್ರೀ ಧರ್ಮೇಂದ್ರ  ಪ್ರಧಾನ್; ಕೇಂದ್ರೀಯ ಸಂಸದೀಯ ಕಾರ್ಯ, ಕಲ್ಲಿದ್ದಲು, ಗಣಿ  ವಿಭಾಗಗಳ ಮಂತ್ರಿಗಳಾದ  ಶ್ರೀ ಪ್ರಲ್ಹಾದ ಜೋಶಿ; ಐ ಐ ಟಿ ಧಾರವಾಡದ ಆಡಳಿತ ಮಂಡಳಿಯ  ಅಧ್ಯಕ್ಷರಾದ  ಶ್ರೀ ವಿನಾಯಕ  ಚಟರ್ಜಿ ಮತ್ತು  ಪ್ರೊ. ವೆಂಕಪ್ಪಯ್ಯ ದೇಸಾಯಿ, ನಿರ್ದೇಶಕರು ಐ ಐ ಟಿ ಧಾರವಾಡ]   ಇವರೆಲ್ಲರ ಉಪಸ್ಥಿತಿಯಲ್ಲಿ ನೆರವೇರಿಸಲಿದ್ದಾರೆ.

ಐ ಐ ಟಿ ಧಾರವಾಡ ರಾಷ್ಟ್ರೀಯ ಮಹತ್ವದ  ಉಚ್ಚ ತಾಂತ್ರಿಕ ವಿದ್ಯಾ ಸಂಸ್ಥೆ ಆಗಿದ್ದು, 2016 ರಲ್ಲಿ ಭಾರತ ಸರ್ಕಾರದ  ಶಿಕ್ಷಣ ಇಲಾಖೆ ಯ ಆಶ್ರಯದಲ್ಲಿ ಮುಂಬೈ ಐ ಐ ಟಿ ಯ  ಪೋಷಕತ್ವದಲ್ಲಿ ಸ್ಥಾಪೀಸಲ್ಪಟ್ಟಿತು.
ಐ ಐ ಟಿ ಧಾರವಾಡದ  ಶೈಕ್ಷಣಿಕ ಚಟುವಟಿಕೆಗಳೆಲ್ಲ  ಜುಲೈ 2016ರಲ್ಲಿ  ಧಾರವಾಡದ  ಹೈಕೋರ್ಟ್ ಪೀಠದ ಪಕ್ಕಕ್ಕೆ ಇರುವ ಜಲ  ಮತ್ತು  ನೆಲ ನಿರ್ವಹಣೆ ( ವಾಲ್ಮಿ ) ಸಂಸ್ಥೆಯಲ್ಲಿ ಆರಂಭಗೊಂಡವು. ಆಗ ಸಂಗಣಕ ವಿಜ್ಞಾನ ಏವಂ ಅಭಿಯಾಂತ್ರಿಕ, ವಿದ್ಯುತ್ ಅಭಿಯಾಂತ್ರಿಕ, ಯಾಂತ್ರಿಕ ಅಭಿಯಾಂತ್ರಿಕ ಮಾತ್ರ ಆರಂಭಗೊಂಡವು.

ಸದ್ಯ ಇನ್ನೂ ನಾಲ್ಕು ವಿಭಾಗಗಳಾದ  ಅಭಿಯಾಂತ್ರಿಕ ಭೌತ ಶಾಸ್ತ್ರ, ನಾಗರಿಕ (ಸಿವಿಲ್) ಅಭಿಯಾಂತ್ರಿಕ, ಜೈವ ರಾಸಾಯನಿಕ (ಬಯೊಕೆಮಿಕಲ್) ಅಭಿಯಾಂತ್ರಿಕ, ಗಣಿತ  ಏವಂ ಸಂಗಣಕ ಶಾಸ್ತ್ರದಲ್ಲಿ ಕೂಡಾ ನಾಲ್ಕು ವರ್ಷದ  ಬಿ. ಟೆಕ್ ಕೋರ್ಸುಗಳು ಆರಂಭವಾದವು. ಹಾಗೆಯೇ  ಬಿಎಸ್, ಎಂಎಸ್, ಎಂ ಟೆಕ್ ( ಯಾಂತ್ರಿಕ ಅಭಿಯಾಂತ್ರಿಕ ), ಎಂ ಎಸ್, ಮತ್ತು ಪಿಎಚ್. ಡಿ ಕಾರ್ಯಕ್ರಮಗಳು ಆರಂಭ ಗೊಂಡಿವೆ. ಧಾರವಾಡ   ಐ ಐ ಟಿ ನಿರಂತರ ಪ್ರಗತಿ ಹೊಂದುತ್ತ ಬಂದಿದ್ದು, ಸದ್ಯ 856 ವಿದ್ಯಾರ್ಥಿಗಳನ್ನು, 73  ಪ್ರಾಧ್ಯಾಪಕರನ್ನು ಹೊಂದಿದ್ದು 400 ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು  ಪ್ರಕಟಿಸಿದ್ದು, 30ಕೋಟಿಗಿಂತ ಹೆಚ್ಚು ರೂಪಾಯಿಗಳ ಅನುದಾನಿತ ಸಂಶೋಧನೆ  ಯೋಜನೆಗಳಲ್ಲಿ ತೊಡಗಿಕೊಂಡಿದ್ದು, 30 ಕ್ಕೂ ಹೆಚ್ಚು ಸಂಶೋಧನೆ, ಸಹಕಾರಗಳ ಒಡಂಬಡಿಕೆಗಳನ್ನು  (MoU) ವಿವಿಧ ಕಂಪನಿ/ ಕಾರ್ಖಾನೆ/ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಜತೆ ಮಾಡಿಕೊಂಡಿದೆ.

2019ರ 10 ಫೆಬ್ರವರಿಯಂದು ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಧಾರವಾಡದ  ಐ ಐ ಟಿ ಯ ಸ್ಥಾಯಿ ಪರಿಸರದ ಶಂಕು ಸ್ಥಾಪನೆ ನೆರವೇರಿಸಿದ್ದರು.

ಈ ಸ್ಥಾಯಿ ಪರಿಸರ 470 ಎಕರೆ  ಭೂಮಿಯನ್ನು ಹೊಂದಿದ್ದು,  ಈ ಭೂಮಿಯನ್ನು ಕರ್ನಾಟಕ  ಸರ್ಕಾರ  ಕೊಟ್ಟಿದೆ. ಇದರ ಜೊತೆಗೆ 65 ಎಕರೆ ಮೀಸಲು ಅರಣ್ಯ ಸಹ  ಅಂತರ್ಗತವಾಗಿದೆ.  ಪ್ರಥಮ 'A' ಹಂತದ ಎಲ್ಲ ಕಟ್ಟಡಗಳ ಅಂದಾಜು ವೆಚ್ಚ 852 ಕೋಟಿ ರೂಪಾಯಿಗಳು.
ಗ್ರಹ (GRIHA, i .e., Green Rating for Integrated Habitat Assessment) 5 ತಾರಾ (5 Star rating for large development master plan) ಮಾಪನ  ಪ್ರಶಸ್ತಿಯನ್ನು  ಪರಿಸರ ಸ್ನೇಹಿ ಬೃಹತ್ ವಿಕಾಸ ಪರಿಯೋಜನೆ ಅಂತರ್ಗತ ನೀಡಿದೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ  ಧಾರವಾಡ  ಐ ಐ ಟಿ ಯು ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (KIMS) ಮುಖಕವಚಗಳನ್ನು ಮತ್ತು ವೈಯಕ್ತಿಕ ರಕ್ಷಣಾ ಕವಚಗಳನ್ನು (PPE) ತಯಾರಿಸಿ ಕೊಡುವದರಲ್ಲಿ ಮಹತ್ವದ ಪಾತ್ರವಹಿಸಿದೆ. ಹಾಗೆಯೇ ಕೋವಿಡ್ ಲಸಿಕೆ ಚುಚ್ಚು ಮದ್ದು ನೀಡುವದರಲ್ಲಿ  ಮತ್ತು ಅದೇ ಸಂಸ್ಥೆಗೆ ಡಿಜಿಟಲ್ ಸಂಪರ್ಕ ಮತ್ತು ವಿತರಣೆ  ಮಾಡುವಲ್ಲಿ McAfee ಸಂಸ್ಥೆಯ ಪ್ರಾಯೋಜಕತ್ವ  ಕೊಡಿಸುವಲ್ಲಿ ಯಶಸ್ವಿಯಾಗಿದೆ.

ಐ ಐ ಟಿ ಧಾರವಾಡ ಹನಿವೆಲ್, ಹೋಮ್ ಟೌನ್ ಸೊಲ್ಯೂಷನ್ (Honeywell Hometown Solutions) , ಇಂಡಿಯಾ ಪ್ರತಿಷ್ಠಾನ, ಲೊವ್ (Lowe) ಇಂಡಿಯಾ ಪ್ರತಿಷ್ಠಾನದ ಪ್ರಾಯೋಜಕತ್ವದಲ್ಲಿ ಐ ಐ ಟಿ ಸಮೀಪ  ಇರುವ ಗರಗ  ಗ್ರಾಮದಲ್ಲಿ

ಆದರ್ಶ ಶುದ್ಧ ಶಕ್ತಿ ಗ್ರಾಮವನ್ನು  ವಿಕಾಸಗೊಳಿಸುತ್ತಿದೆ ತನ್ನ ಗ್ಲೋಬಲ್    ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಅಫರ್ಡೇಬಲ್  & ಕ್ಲೀನ್ ಎನರ್ಜಿ (Global Centre of Excellence in Affordable & Clean Energy) ಆಶ್ರಯದಲ್ಲಿ.

ಉತ್ತರ ಕರ್ನಾಟಕದ ಯುವ ಜನರಲ್ಲಿ ಕೌಶಲ್ಯ  ಅಭಿವೃದ್ಧಿ ಕಾರ್ಯಕ್ರಮ  ಮಾಡುತ್ತಿದ್ದು ಸೆಲ್ಕೋ ಫೌಂಡೇಶನ್ ಮತ್ತು ಮುಖ್ಯ ವಿಜ್ಞಾನ ಸಲಹೆಗಾರ  ಭಾರತ  ಸರ್ಕಾರ ಅವರ  ಜತೆ  ಸಹಯೋಗದಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಲಿದೆ. ಧಾರವಾಡ ಐ ಐ ಟಿ ಯು ತನ್ನದೇ ಆದ  ಧಾರವಾಡ ಸಂಶೋಧನೆ, ತಂತ್ರಜ್ಞಾನ ಪೋಷಕ ಕೇಂದ್ರ ಪ್ರತಿಷ್ಠಾನವನ್ನು (DhaRTI) 2013ರಲ್ಲಿ ಸೆಕ್ಷನ್ 8 ಅಡಿಯಲ್ಲಿ ಆರಂಭ ಮಾಡಿದೆ. ಐ ಐ ಟಿ ಧಾರವಾಡದ ಮತ್ತಿತರ  ವಿಶೇಷ  ಸೌಲಭ್ಯಗಳೆಂದರೆ  ಅನಂತ  ಗಣಕ ( ಅಧಿಕ ಸಾಮರ್ಥ್ಯಶಾಲಿ ಗಣಕಯಂತ್ರ i.e., High Performance Computer), ಅಂತರಿಕ್ಷ ಸಂಖ್ಯಾ ವಿಜ್ಞಾನ ಪ್ರಯೋಗಶಾಲಾ (Space Data Science Lab), ಅತ್ಯಾಧುನಿಕ  ಕೇಂದ್ರೀಯ ಉಪಕರಣ  ಸೌಲಭ್ಯ (Sophisticated Central Instrumentation Facility), ಅಗ್ನಿ ಪ್ರಯೋಗಶಾಲಾ (Fire Lab) ಇತ್ಯಾದಿ.